**ತಾತ್ಪರ್ಯ:**– ಶ್ರೀಹರಿಯು ಎಲ್ಲರಲ್ಲೂ ಇದ್ದು ತಾನುಂಡು ಉಣಿಸುವನೆಂದು ಮೇಲಿನ ಪದ್ಯದಲ್ಲಿ ಹೇಳಿರುವರು. ಹಾಗೆ ಉಣದಿದ್ದರೆ ಕ್ಷುದ್ಬಾಧೆಯಿಂದ ತಲ್ಲಣಿಸಿ ಏಳಲು ಕೂಡಲು ಶಕ್ತಿ ಇಲ್ಲದೆ ಕೃಶನಾಗುವನು; ಆದುದರಿಂದ ತಾನುಂಡು ಹೊಟ್ಟೆ ತುಂಬಿಸಿಕೊಳ್ಳುವನೆಂದು ಶಂಕೆ ಮಾಡಬಾರದೆಂದು ಆ ಶಂಕೆಯನ್ನು ಈ ಪದ್ಯದಿಂದ ಪರಿಹರಿಸುತ್ತಾರೆ. ಶ್ರೀಹರಿಗೆ ಭೋಜನ ಮಾಡದೇ ಇದ್ದುದರಿಂದ ಹಸಿವಾಗಲಿ, ದೇಹವು ಕೃಶವಾಯಿತೆಂದಾಗಲಿ, ಬಲಹೀನವಾಗಲಿ ಇಲ್ಲ. ಉಂಡುದುದರಿಂದ, ಹೆಚ್ಚಿಗೆ ಬಲ ಬಂದಿತು; ಪುಷ್ಟಿಯಾದನು ಎಂಬುವುದಿಲ್ಲ. ಯಾವಾಗಲೂ ಒಂದೆ ಪ್ರಕಾರವಾಗಿರುವನು. ದೇವತಾಗಣರಲ್ಲಿ ಇವನಿಗೆ ಸಮರೆಂದು ಮತ್ತೊಬ್ಬರನ್ನು ಉಪಮಾನ ಕೊಡುವಂತಿಲ್ಲ. ಜನನ ಮರಣಾದಿಗಳಿಲ್ಲ. ಇಂತಹಾ ಅಪರಿಮಿತವಾದ ಮಹಾಮಹಿಮೆಯುಳ್ಳವನು; ಕೃಪಣವತ್ಸಲನಾದ ಶ್ರೀಹರಿಯು ತನ್ನನ್ನು ನಂಬಿದವರಿಗೆ ಮುಕ್ತಿಯನ್ನು ಕೊಟ್ಟು ಮತ್ತೂ ಹುಟ್ಟುವಿಕೆ ಇಲ್ಲದೇ ಮಾಡುವನು.

ಅವತಾರಿಕೆ:– ಪರಮಾತ್ಮನು ಪ್ರಪಂಚವನ್ನು ತಾನೇ ಸೃಷ್ಟಿಸಿ ರಕ್ಷಿಸಿ ಮತ್ತೂ ತಾನೇ ಕೊಲ್ಲುವದೆಂತು ಮನಸ್ಸಿಗೆ ಹಿತವಾಗುವದು? ತನ್ನ ಮಕ್ಕಳನ್ನು ತಾನೇ ಕೊಲ್ಲಲು ಹೇಗೆ ಮನಸ್ಸು ಬರುವದು ಅಂದರೆ ದೃಷ್ಟಾಂತದಿಂದ ಆ ಸಂಶಯವನ್ನು ಪರಿಹರಿಸುತ್ತಾರೆ.

**ಬಿತ್ತಿಬೀಜವ ಭೂಮಿಯೊಳು ನೀ**
**ರೆತ್ತಿಬೆಳಸಿದ ಬೆಳಸು ಪ್ರಾಂತಕೆ**
**ಕಿತ್ತಿಮೆಲುವಂದದಲಿ ಲಕ್ಷ್ಮೀರಮಣಲೋಕಗಳ ॥**
**ಮತ್ತೆ ಜೀವರ ಕರ್ಮಕಾಲೋ**
**ತ್ಪತ್ತಿ ಸ್ಥಿತಿಲಯ ಮಾಡುತಲಿ ಸಮ**
**ವರ್ತಿಎನಿಸುವ ಖೇದಮೋದಗಳಿಲ್ಲದನವರತ ॥ ೫೩ ॥**

**ಪದ್ಯಾರ್ಥ:**– ಭೂಮಿಯೊಳು, ಬೀಜವಬಿತ್ತಿ ನೀರೆತ್ತಿ=ಅವುಗಳಿಗೆ ನೀರು ಕಟ್ಟಿ, ಬೆಳಸಿದ ಬೆಳಸು ಪ್ರಾಂತಕೆ= ಕಡೆಗೆ, ಕಿತ್ತು=ತಾವೇ ಕಿತ್ತು, ಮೆಲುವಂದದಲಿ=ತಾವೇ ಅವುಗಳನ್ನು ಅನ್ನಾದಿಗಳನ್ನು ಮಾಡಿ ಭುಂಜಿಸುವಂತೆ, ಲಕ್ಷ್ಮೀರಮಣ=ಶ್ರೀಪರಮಾತ್ಮನು, ಲೋಕಗಳ=೧೪ ಲೋಕಗಳನ್ನು ಮತ್ತೆ ಜೀವರ, ಕರ್ಮಕಾಲ=ಕರ್ಮಕಾಲವನ್ನರಿತು, ಉತ್ಪತ್ತಿ = ಸೃಷ್ಟಿಯನ್ನು, ಸ್ಥಿತಿ=ರಕ್ಷಣೆಯನ್ನು, ಲಯ=ಸಂಹಾರವನ್ನೂ, (ಪ್ರಳಯವನ್ನೂ) ಅನವರತ= ಪ್ರತಿ ಕಲ್ಪಗಳಲ್ಲೂ, ಖೇದ=ಕ್ಲೇಶವಾಗಲಿ, ಮೋದವಾಗಲಿ ಇವೆರಡೂ ಇಲ್ಲದೆ ಮಾಡುತಲಿ, ಸಮವರ್ತಿ ಎನಿಸುವನು.

**ತಾತ್ಪರ್ಯ:**–ಕೃಷಿ ಮಾಡುವವರು ಭೂಮಿಯಲ್ಲಿ ಬೀಜವನ್ನು ಬಿತ್ತಿ, ಅವುಗಳಿಗೆ ಕಾಲ ಕಾಲಕ್ಕೆ ನೀರು ಹಾಕಿ, ಬೆಳಸಿದ ಬೆಳಸನ್ನು ಕಿತ್ತು ಆ ಧಾನ್ಯಗಳನ್ನು ತಾವು ಭುಂಜಿಸುವರು. ಅವರಿಗೆ ಹೇಗೆ ಬೀಜವನ್ನು ಬಿತ್ತುವ ಕಾಲದಲ್ಲಿ ಸಂತೋಷವೂ ಬೆಳೆದ ಬೆಳಸನ್ನು ಕಿತ್ತುವ ಕಾಲದಲ್ಲಿ ವ್ಯಸನವೂ ಆಗುವುದಿಲ್ಲವೋ ಅದರಂತೆಯೇ ಪರಮಾತ್ಮನು ಲೋಕಗಳನ್ನೂ ಲೋಕದಲ್ಲಿ ಸಕಲ ಜೀವರನ್ನು ಸೃಷ್ಟಿಸಿ, ರಕ್ಷಿಸಿ, ಸಂಹರಿಸುವನು; ಅದರಿಂದ ಅವನಿಗೆ ಸಂತೋಷವೂ ಇಲ್ಲ. ವ್ಯಸನವೂ ಇಲ್ಲ. ಸರ್ವದಾ ಸಮವರ್ತಿಯಾಗಿರುವನೆಂಬ ತಾತ್ಪರ್ಯ.

ಅವತಾರಿಕೆ:–ಹಸಿವು ನೀರಡಿಕೆಗಳು ದೇವತೆಗಳನ್ನೆ ಪೀಡಿಸುವುದಿಲ್ಲ. ಇನ್ನು ಪರಮಾತ್ಮನನ್ನು ಬಾಧಿಸುವುದಿಲ್ಲವೆಂದು ಹೇಳುವುದೇನು ಎಂಬ ಕೈಮುತ್ಯನ್ಯಾಯ ತೋರಿಸುವುದಕ್ಕಾಗಿ ದೇವತೆಗಳಿಗೆ ಕ್ಷುದ್ಬಾಧೆ ಇಲ್ಲವೆಂದು ಹೇಳುತ್ತಾರೆ.

**ಶ್ವಸನ ರುದ್ರೇಂದ್ರ ಪ್ರಮುಖಸುಮ**
**ನಸರೊಳಿದ್ದರು ಕ್ಷುತ್ಪಿಪಾಸಗ**
**ಳೊಶದಲಿಪ್ಪವು ಸಕಲಭೋಗಕೆ ಸಾಧನಗಳಾಗಿ ॥**
**ಅಸುರಪ್ರೇತಪಿಶಾಚಗಳ ಬಾ**
**ಧಿಸುತಲಿಪ್ಪವು ದಿನದಿನದಿ ಮಾ**
**ನಿಸರೊಳಗೆ ಮೃಗಪಕ್ಷಿಜೀವರೊಳಿದ್ದು ಪೋಗುವವು ॥ ೫೪ ॥**

**ಪದ್ಯಾರ್ಥ:**–ಶ್ವಸನ=ವಾಯು ದೇವರು, ರುದ್ರ=ರುದ್ರ ದೇವರು, ಇಂದ್ರ= ಇಂದ್ರ ದೇವರು, ಪ್ರಮುಖ= ಮೊದಲಾದ, ಸುಮನಸರೊಳು=ದೇವತೆಗಳೊಳು, ಕ್ಷುತ್ಪಿ–ಪಾಸಗಳು=ಹಸಿವು ಬಾಯಾರಿಕೆಗಳು, ಇದ್ದರೂ ಸಕಲಭೋಗಕೆ=ಸಕಲವಾದ

